**ಪಾಠ 4** **ಅಕ್ಟೋಬರ್ 20–26**

# ಐಕ್ಯತೆಗೆ ಸೂತ್ರ



## ಸಬ್ಬತ್ತು ಮಧ್ಯಾಹ್ನ

**ಈ ವಾರದ ಅಬ್ಯಾಸಕ್ಕೆ ಓದಿರಿ:** ಎಫೆಸ 1:3–14; 4:7; 2:11–22; 4:1–6; ಮತ್ತಾ 20:25–28; ಎಫೆಸ 5:15–6:9.

**ಸ್ಮರಣ ವಾಕ್ಯ: "ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಿಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ಅದೇನೆಂದರೆ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ ಕ್ರಿಸ್ತನಲ್ಲಿಯೇ ಸಮಸ್ತವೂ ಒಂದಾಗುವುದು".** ಎಫೆಸದವರಿಗೆ 1:9,10.

ಎಫೆಸ ಪಶ್ಚಿಮ ಏಷ್ಯಾ ಖಂಡದ ಒಂದು ಪ್ರಭಾವಿತ ಪ್ರಧಾನ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲಿಯ ಸಭೆಯಲ್ಲಿ ಸಮಾಜದ ಎಲ್ಲ ವರ್ಗಗಳ ಜನರು ಯೆಹೂದ್ಯರು, ಅನ್ಯರು ಹಾಗೂ ಇತರರು ಇದ್ದರು. ಜಗತ್ತಿನಲ್ಲಿ ಹೇಗೆ ನಾನಾತರದ ಜನರಿದ್ದು ವೈವಿದ್ಯ ಸಂಸ್ಕಾರಗಳು ಜನರನ್ನು ಕದನಕ್ಕಿಳಿಸುವವೋ ಹಾಗೆಯೇ ಸಭೆಯಲ್ಲಿ ಕದನಗಳಿರುವುದು. ಸಾಮಾನ್ಯವೆಂದಿನಿಸಿದರೂ ಕ್ರಿಸ್ತನ ಸಭೆಯಲ್ಲಿದ್ದರಿಂದ, ಆತನ ದೇಹದ ಭಾಗಗಳಿಗೆ ಸದಸ್ಯರು ಐಕ್ಯತೆಯಿಂದಿದ್ದರು. ಇದರಿಂದಾಗಿ, ಪೌಲನು ಅನ್ಯೋನ್ಯತೆ ಇರಬೇಕೆಂದು ಬಯಸಿ ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿಯೂ ಈ

ವಿಷಯವೇ ಕೇಂದ್ರ ವಸ್ತುವಾಗಿದೆ.

ಪೌಲನು ಐಕ್ಯತೆಯು ಎರಡು ಅಂಶಗಳನ್ನು ಹೊಂದಿದೆ: ಸಭೆಯಲ್ಲಿಯ ಐಕ್ಯತೆ, ಒಂದೇ ದೇಹ ಕ್ರಿಸ್ತನಲ್ಲಿ ಒಂದಾಗಿರುವುದಕ್ಕಾಗಿ ಕರೆಯಲ್ಪಟ್ಟಿರುವ ಯೆಹೂದ್ಯರು ಮತ್ತು ಅನ್ಯರು ಒಂದಾಗಿರುವುದು. ವಿಶ್ವದಲ್ಲಿಯ ಐಕ್ಯತೆ, ಭೂಮ್ಯಾಕಾಶಗಳಲ್ಲಿಯ ಸರ್ವವೂ ಕೊನೆಗೆ ಕ್ರಿಸ್ತನಲ್ಲಿ ಒಂದಾಗುವುದು.

ಈ ಐಕ್ಯತೆಯ ಮೂಲ ಯೇಸುಕ್ರಿಸ್ತನು. ಪೌಲನು 'ಕ್ರಿಸ್ತನಲ್ಲಿ' ಅಥವಾ 'ಕ್ರಿಸ್ತನೊಡನೆ' ಎಂಬ ಪದಗಳನ್ನು ಎಫೆಸದವರಿಗೆ ಪತ್ರಿಕೆಯಲ್ಲಿ ಅನೇಕ ಸಾರಿ ಉಪಯೋಗಿಸಿದ್ದಾನೆ, ಯಾಕೆಂದರೆ ದೇವರು ಯೇಸುಕ್ರಿಸ್ತನ ಬದುಕು, ಮರಣ ಮತ್ತು ಪುನರುತ್ಥಾನಗಳ ಮೂಲಕ ನಮ್ಮಲ್ಲಿಯೂ, ಇಡೀ ವಿಶ್ವದಲ್ಲಿಯೂ ಸಾಧಿಸಿರುವ ಐಕ್ಯತೆಯನ್ನು ತೋರಿಸುವುದಕ್ಕಾಗಿ. ಕ್ರಿಸ್ತನಲ್ಲಿ ಸರ್ವವನ್ನು ಪುನಃ ಒಂದಾಗಿ ಐಕ್ಯತೆಯಲ್ಲಿ ತರಬೇಕೆಂಬುದೇ ದೇವರ ರಕ್ಷಣೆಯ ಯೋಜನೆಯಾಗಿದೆ. ಈ ಐಕ್ತೆಯು ಪರಪೂರ್ಣಗೊಳ್ಳುವುದು ಯುಗದ ಸಮಾಪ್ತಿಯಲ್ಲಿಯೇ.

**ಭಾನುವಾರ** **ಅಕ್ಟೋಬರ್ 21**

**ಕ್ರಿಸ್ತನಲ್ಲಿಯ ಆಶೀರ್ವಾದಗಳು**

**ಎಫೆಸದವರಿಗೆ 1:3–14 ಓದಿರಿ: ಇಲ್ಲಿ ಪೌಲನು ತಿಳಿಸಿದಂತೆ, ಕ್ರಿಸ್ತನಲ್ಲಿ ನಮಗೇನು ಕೊಡಲ್ಪಟ್ಟಿದೆ?**

–––––––––––––––––––––––––––––––––––––––––––

–––––––––––––––––––––––––––––––––––––––––––

–––––––––––––––––––––––––––––––––––––––––––

ಯೇಸುವಿನ ಹಿಂಬಾಲಿಕರು ದೇವರ ಬಹಳ ಆಶೀರ್ವಾದಗಳಿಗಾಗಿ ಆತನಿಗೆ ಮಹಿಮೆ ಸಲ್ಲಿಸಬೇಕು. ಕ್ರಿಸ್ತನಲ್ಲಿ ನಮ್ಮೆಲರನ್ನು ದೇವರು ತನ್ನ ಪುತ್ರ ಪುತ್ರಿಯರನ್ನಾಗಿ ಮಾಡಿಕೊಂಡಿದ್ದಾನೆ, ಮತ್ತು ನಾವು ಆತನನ್ನು ಜಗತ್ತಿನಲ್ಲಿ ಪ್ರೀತಿಸಬೇಕು. ಕ್ರಿಸ್ತನ ಮೂಲಕ ದೇವರೊಡನೆ ನಮಗುಂಟಾದ ನೂತನ ಸಂಬಂಧವನ್ನು ಪೌಲನು ಉಪಮೆಯಗಳ ಮೂಲಕ ಬಣ್ಣಿಸಿದ್ದಾನೆ. ಅವುಗಳಲ್ಲಿ ಒಂದು, ದೇವರು ನಮ್ಮನ್ನು ತನ್ನ ಕುಟುಂಬದ ಮಕ್ಕಳೆಂದು ದತ್ತು ತೆಗೆದುಕೊಳ್ಳುವುದು. ಈ ಕುಟುಂಬದ ಹೋಲಿಕೆಯೂ ಕೂಡ ದೇವರು ಇಸ್ರಾಯೇಲ್ಯರಿಗೆ ದೇವರು ಮಾಡಿದ ವಾಗ್ದಾನಗಳಿಗೆ ಇವರೂ ಬಾಧ್ಯಸ್ಥರು (ರೋಮ 8:17, ಗಲಾ 4:7). ಕ್ರಿಸ್ತನೊಡನೆಯ ಈ ಸಂಬಂಧ

ಮತ್ತು ಆತನಲ್ಲಿರುವದರ ಪ್ರತಿಫಲವೇ ಕ್ರೈಸ್ತ ಐಕ್ಯತೆಯ ಮೂಲ. ಈ ವಾಕ್ಯದ ಮೂಲಕ ನಮಗೆ ಗೋಚರವಾಗುವ ಇನ್ನೊಂದು ವಿಷಯವೇನೆಂದರೆ ದೇವರು ಯಾವಾಗಲೂ ಮಾನವಕುಲವನ್ನು ಪುನಃ ಕ್ರಿಸ್ತನಲ್ಲಿ ಒಂದುಗೂಡಿಸಬೇಕೆಂಬ ಉದ್ದೇಶ ಹೊಂದಿದ್ದನೆಂದು ಮತ್ತು ದೇವರ ಕುಟುಂಬದಲ್ಲಿ ನಾವೆಲ್ಲರೂ ದೇವರ ಮಕ್ಕಳು, ಸಮವಾಗಿ ಪ್ರೀತಿ ಮತ್ತು ಪೋಷಣೆ ಪಡೆದಿದ್ದೇವೆ.

ಪೂರ್ವ ಸಂಕಲ್ಪ ವಿಷಯವಾಗಿ(ಎಫೆ 1:5,11)ನ್ನು ಓದುವಾಗ ಕೆಲವರು ಗೊಂದಲಕ್ಕೀಡಾಗಬಹುದು. ದೇವರು ಕೆಲವರನ್ನು ರಕ್ಷಣೆಗಾಗಿ ಆಯ್ದುಕೊಂಡಿದ್ದಾನೆ ಎಂಬ ವಾಗ್ದಾನ, ಕೆಲವರನ್ನು ನಾಶನಕ್ಕೆ ಆಯ್ದುಕೊಂಡಿದ್ದಾನೆ ಎಂದೂ ಅರ್ಥವಾಗುತ್ತದೆ. ಅದು ಸತ್ಯವೇದದ ಬೋಧನೆಯಲ್ಲ. ಬದಲಾಗಿ ದೇವರು ಪೂರ್ವದಲ್ಲಿಯೇ ಜಗದುತ್ಪತ್ತಿಯ ಮೊದಲೇ ಎಲ್ಲರೂ ರಕ್ಷಣೆ ಹೊಂದಬೇಕೆಂದು ಯೋಜನೆಯನ್ನು ಆಯೋಚಿಸಿದ್ದರು. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ನಿತ್ಯ ಜೀವ ಪಡೆಯಬೇಕೆಂದು ಆತನನ್ನು ಕೊಟ್ಟನು". (ಯೋಹಾನ 3:16, 1ತಿಮೋ 2:6; 2 ಪೇತ್ರ 3:9) ಯಾರು ತನ್ನ ರಕ್ಷಣೆಯನ್ನು ಸ್ವೀಕರಿಸುತ್ತಾರೆ ಎಂಬುದನ್ನು ದೇವರು ಮೂಂಚೆಯೇ ತಿಳಿದಿದ್ದಾನೆ, ಆದರೆ ಇದು ಒಬ್ಬರ ನಿರ್ಧಾರವನ್ನು ದೇವರು ಮಾಡಿದ್ದಾನೆ ಎಂದಲ್ಲ. ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೋ ಅದರ ಫಲವಾಗಿ ರಕ್ಷಣೆಯ ಬಾಗಿಲು ಇಡೀ ಮಾನವ ಕುಲಕ್ಕೆ ತೆರೆದಿದೆ. ಇಲ್ಲಿ ಸಮಸ್ಯೆ ಏನೆಂದರೆ: ಈ ಆಹ್ವಾನಕ್ಕೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ? ದೇವರು ಯಾರನ್ನು ಬಲದಿಂದ ರಕ್ಷಿಸುವುದಿಲ್ಲ.

"ಪರಲೋಕದ ಸಮಿತಿಯಲ್ಲಿ ಮಾನವರಿಗಾಗಿ ಒಂದು ಯೋಜನೆ ನಿರೂಪಗೊಂಡಿತು ಮಾನವರು ಪಾಪಿಗಳಾಗಿದ್ದರೂ ಅವರ ಅವಿಧೇಯತೆಯಲ್ಲಿ ನಾಶವಾಗಬಾರದು ಆದರೆ ಕ್ರಿಸ್ತನಲ್ಲಿಯ ನಂಬಿಕೆಯ ಮೂಲಕ ಆತನನ್ನು ತಮಗಾಗಿ ಅರ್ಪಿಸಲ್ಪಟ್ಟ ನಿಶ್ಚಯವಾದ ಬಲಿ ಎಂದು ಸ್ವೀಕರಿಸಿದರೆ, ಅವರು ದೇವರಿಂದ ಆಯ್ಕೆಯಾದವರೂ, ದೇವರ ಚಿತ್ತದ ಮೇರೆಗೆ ಮಕ್ಕಳಾಗಿ ನೇಮಿಸಲ್ಪಟ್ಟವರಾಗುತ್ತಾರೆ. ದೇವರ ಅಭಿಲಾಷೆ ಎಲ್ಲರೂ ರಕ್ಷಣೆಹೊಂದಬೇಕೆಂದು ಯಾಕೆಂದರೆ ವಿಮೋಚನೆಗಾಗಿ ಅವಶ್ಯವಾದ ಬಲಿಯನ್ನು ದೇವರು ತನ್ನ ಒಬ್ಬನೇ ಮಗನನ್ನು ಕೊಡುವುದರ ಮೂಲಕ ಮಾಡಿರುವನು, ನಾಶವಾಗುವವರು ನಾಶವಾಗಿಯೇ ಹೋಗುತ್ತಾರೆ ಯಾಕೆಂದರೆ ಕ್ರಿಸ್ತನ ಮೂಲಕ ದೇವರ ಮಕ್ಕಳಾಗುವ ಸದವಕಾಶವನ್ನು, ಅವರು ನಿರಾಕರಿಸಿದ್ದಾರೆ." ಎಲೆನ್ ಜಿ ವೈಟ್ ಕಾಮೆಂಟ್ಸ್, ದಿ ಎಸ್.ಡಿ.ಯೆ ಬೈಬಲ್ ಕಾಮೆಂಟ್ರಿ, ಸಂಪುಟ 6, ಪು. 1114.

**ಸೋಮವಾರ** **ಅಕ್ಟೋಬರ್ 22**

**ಗೋಡೆಯೊಡೆಯುವುದು**

ಮಾನವರನ್ನು ಆಳವಾಗಿ ಬೇರ್ಪಡಿಸಲು ಕೆಲವು ಕಾರಣಗಳು ಜಾತಿ, ಕುಲ ಮತು ಧರ್ಮ ಅನೇಕ ಸಮಾಜಗಳಲ್ಲಿ ಜನರನ್ನು ಗುರುತಿಸುವ ಚೀಟಿಗಳು ಅವರ ಸಂಬಂಧಿಸಿದ ಜನಾಂಗ ಅಥವಾ ಮತಗಳನ್ನು ಸೂಚಿಸುತ್ತವೆ, ಈ ತರದ ಗುರುತಿಸುವಿಕೆ ಅವರ ಅವಕಾಶ, ಅಥವಾ ಅವರ ನಿರ್ಬಂಧನೆಗಳಿಗೆ ಸಂಬಂಧಿಸಿದೆ ಅಲ್ಲದೆ ಅವರವರ ದಿನನಿತ್ಯದ ಬದುಕಿಗೆ ಹೊಂದಿಕೊಂಡಿರಲು ಸಹಾಯವಾಗುತ್ತವೆ. ಯುದ್ಧ ಕದನಗಳ ಸಮಯದಲ್ಲಿ ಈ ಗುರುತು ಮತ್ತು ವ್ಯತ್ಯಾಸಗಳು ಶೋಷಣೆ ಮತ್ತು ಹಿಂಸೆಗೂ ಎಡೆಮಾಡಿ ಕೊಡುತ್ತವೆ.

**ಎಫೆಸದವರಿಗೆ 2:11–12 ರಲ್ಲಿ ಪೌಲನು ಒಳ್ಳೆಯ ಜೀವನ ಮಾದರಿಯನ್ನು ಸೂಚಿಸುತ್ತಾನೆ. ಕ್ರಿಸ್ತನಲ್ಲಿಯ ನಮ್ಮ ಐಕ್ಯತೆ ನಮ್ಮ ವ್ಯತ್ಯಾಸಗಳ ಮೇಲೆ ಯಾವ ಪರಿಣಾಮ ಬೀರುತ್ತದೆ? ಕ್ರಿಸ್ತನ ಶಿಲುಬೆಯ ಮೇಲಿನ ಸಾವು ಯಾವುದನ್ನು ಒಡೆದು ಹಾಕಿದೆ?**

____________________________________________

____________________________________________

____________________________________________

ಎಫೆಸದವರು ಕ್ರಿಸ್ತನಲ್ಲಿ ಕೃಪೆಯನ್ನು ಸ್ವೀಕರಿಸುವ ಪೂರ್ವದಲ್ಲಿ ಅವರ ಬದುಕುಗಳು ಹೇಗಿದ್ದವು ಎಂಬುದನ್ನು ಸ್ಮರಿಸಿಕೊಳ್ಳಬೇಕೆಂದು ಪೌಲನು ಅವರನ್ನು ವಿನಂತಿಸುತ್ತಿದ್ದಾನೆ. ಜಾತಿ, ಧರ್ಮ, ಸಂಸ್ಕೃತಿಗಳ ವ್ಯತ್ಯಾಸಗಳು ಜನರಲ್ಲಿ ದ್ವೇಷ ಕದನಗಳನ್ನು ಹುಟ್ಟಿ ಹಾಕಿದವು. ಶುಭ ಸಂದೇಶವೇನೆಂದರೆ, ಕ್ರಿಸ್ತನಲ್ಲಿ ನಾವೆಲ್ಲರೂ ಒಂದೇ ಜನಾಂಗ. ನಮ್ಮೆಗೆಲ್ಲರಿಗೂ ಒಬ್ಬನೇ ರಕ್ಷಕ ಮತ್ತು ಪ್ರಭು. ನಾವೆಲ್ಲರೂ ದೇವರ ಜನಾಂಗದವರು. "ಈಗಲಾದರೂ ಮೊದಲು ದೂರವಾಗಿದ್ದ ನೀವು ಕ್ರಿಸ್ತಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮಿಪಸ್ಥರಾದಿರಿ" ಎಫೆಸ 2:13.

ಯೆರೂಸಲೇಮಿನ ಪುರಾತನ ದೇವಾಲಯದಲ್ಲಿ ಬೇರ್ಪಡಿಸುವ ಒಂದು ಗೋಡೆಯಿತ್ತು, ಅದು ಯೆಹೂದ್ಯರಾದವರಿಗೆ ಮಾತ್ರ ಪ್ರವೇಶವಿರುವ ಸ್ಥಳವನ್ನು ಸೂಚಿಸುತ್ತಿತ್ತು. ಗೋಡೆಯ ಮೇಲಿನ ಫಲಕ ಆ ಗಡಿಯನ್ನು ಇತರರು, ಸಾವು ನೋವಿದ್ದರು ದಾಟಬಾರದೆಂದು ಸೂಚಿಸುತ್ತಿತ್ತು. ಪೌಲನು ತನ್ನ ಸೇವಾ ಪ್ರಯಾಣದ ನಂತರ ಹಿಂದಿರುಗಿದ ಮೇಲೆ ಈ ಗೋಡೆಯನ್ನು ದಾಟಿದ ಆರೋಪ

ಎದುರಿಸಬೇಕಾಯ್ತು. ಪೌಲನ್ನು ಬಂಧಿಸಿದಾಗ ಅವನ ಮೇಲಿನ ಆರೋಪ, ಎಫೆಸದ ತ್ರೋಫಿಮನನ್ನು ದೇವಾಲಯದ ನಿಷೇಧಿತ ಪ್ರದೇಶದಲ್ಲಿ ಕರೆದು ತಂದು, ಅದನ್ನು ಹೊಲೆ ಮಾಡಿದನೆಂದು(ಅ.ಕೃತ್ಯ 21:29) ಈ ಪತ್ರಿಕೆಯಲ್ಲಿ ಪೌಲನು ವಾದ, ಕ್ರಿಸ್ತನೇ "ನಮಗೆ ಸಮಾಧಾನ ಕರ್ತವಾಗಿದ್ದಾನೆ  ನಮ್ಮನ್ನು ಆಗಲಿಸಿದ ಅಡ್ಡ ಗೋಡೆಯನ್ನು ಕೆಡವಿ ಹಾಕಿದನು, ಉಭಯರನ್ನು(ಜನಾಂಗಗಳನ್ನು) ಒಂದಾಗಿ ಮಾಡಿದ್ದಾನೆ"(ಎಫೆಸ 2:14).

ಕ್ರಿಸ್ತನಲ್ಲಿ ವಿರ್ಶವಾಸಿಗಳೆಲ್ಲರೂ ಅಬ್ರಹಾಮನ ಸಂತತಿಯವರಾಗಿದ್ದು ಹೃದಯದ ಸುನ್ನತಿ ಹೊಂದಿರುತ್ತಾರೆ. ಅಬ್ರಹಾಮನಿಗೆ ದೇವರು ಅಂದು ದೇಹದಲ್ಲಿ ಸುನ್ನತಿ ಮಾಡಿಸಿದ್ದು ನಂತರ ವಿಶ್ವಾಸಿಗಳು ಕ್ರಿಸ್ತನಲ್ಲಿ ಹೃದಯದ ಸುನ್ನತಿ ಹೊಂದುವರೆಂದು ಸೂಚಿಸುತ್ತಿತ್ತು. (ಧರ್ಮ 10:16). "ನೀವು ಆತನಲ್ಲಿ ಸುನ್ನತಿಯನ್ನು ಹೊಂದಿದಿರಿ, ಈ ಸುನ್ನತಿಯು ಕೈಯಿಂದ ಆಡಿದ್ದಲ್ಲ ಇದು ಪಾಪದೀನ ಸ್ವಭಾವವನ್ನು  ವಿಸರ್ಜಿಸುವದೇ; ಇದೇ ಕ್ರೈಸ್ತೀಯ ಸುನ್ನತಿ". (ಕೊಲೊಸ್ಸೆ 2:11).

**ಮತೊಮ್ಮೆ ಎಫೆಸದವರಿಗೆ 2:11–22 ಓದಿರಿ: ಪೌಲನು ಇಲ್ಲಿ ತಿಳಿಸಿದ ವಾಸ್ತವಾಂಶಗಳು ನಮ್ಮ ಸಭೆಗಳಲ್ಲಿ ಇನ್ನು ಯಾವ ಯಾವ ರೀತಿಯಲ್ಲಿ ಕಂಡುಬರುತ್ತವೆ? ಇನ್ನೂ ಸವಾಲಾಗಿ ಉಳಿದಿರುವವು ಯಾವುವು?**

**ಮಂಗಳವಾರ** **ಅಕ್ಟೋಬರ್ 23**

**ಒಂದೇ ದೇಹದಲ್ಲಿ ಐಕ್ಯತೆ**

ಎಫೆಸದವರಿಗೆ ಪೌಲನು ಬರೆದ ಪ್ರೇರಣ ಪತ್ರಿಕೆ ಕಾರ್ಯರೂಪದ್ದು ಯಂಕ್ರನ್ಯ ಮತ್ತು ಅನ್ಯರ ನಡುವಿನ ಐಕ್ಯತೆ, ನಾನಾ ವಿಧಧ ಸಂಸ್ಕೃತಿ, ಜಾತಿ ಬೇರೆ ಬೇರೆ ಹಿನ್ನಲೆಗಳಿಂದ ಬಂದ ಜನರಲ್ಲಿಯ ಐಕ್ಯತೆ ಒಂದು ಬರೀ ಕತೆಯಲ್ಲಿ ಅಥವಾ ಬರವಣಿಗೆಯಲ್ಲಿಯ ಸಿದ್ಧಾಂತವಲ್ಲ; ಅದು ನಿಜ ಬದುಕು, ಮತ್ತು "ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂಬ ಹಂಗು" ಎಫೆಸ 4:1.

**ಎಫೆಸ 4:1–3ರಪ್ರಕಾರ ಕ್ರಿಸ್ತನಲ್ಲಿ ಕರೆಯಲ್ಪಟ್ಟ ಕ್ರೈಸ್ತರು ಯಾವ ರೀತಿಯಲ್ಲಿ ಯೋಗ್ಯರಾಗಿ ಬದುಕಬೇಕು?**

---

ಕ್ರೈಸ್ತನಲ್ಲಿಯ ಈ ಎಲ್ಲ ಸದ್ಗುಣಗಳ ಮತ್ತು ಒಳ್ಳೆಯ ಕ್ರೀಯೆಗಳ ಫಲ.

“ಸಮಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟು ಪವಿತ್ರಾತ್ಮನಿಂದುಂಟಾಗುವ ಐಕ್ಯತೆ”ಗೆ ಸಹಾಯ ಮಾಡುತ್ತ(ಎಫೆಸ 4:3) ಈ ಎಲ್ಲ ಗುಣಗಳು ಪ್ರೀತಿಯಲ್ಲಿ ಬೇರೂರಿವೆ, (1ಕೊರಿಂಥ 13:1–7) ಪ್ರೀತಿಯನ್ನು ಕಾರ್ಯರೂಪಕ್ಕೆ ಪರಿವರ್ತಿಸಿದಾಗ ಸಹೋದರ ಸಹೋದರಿರಲ್ಲಿಯ ಸಂಬಂಧಗಳಿಗೆ ಜೀವ ತುಂಬುತ್ತದೆ, ಕ್ರೈಸ್ತ ಸಮುದಾಯಗಳಲ್ಲಿ ಸಮಾಧಾನ, ಐಕ್ಯತೆಗಳಿಗೆ ಸ್ಪೂರ್ತಿ ಸಿಕ್ಕಿ ಇತರರಿಗೂ ಅದು ವಿಸ್ತರಿಸಲ್ಪಡುತ್ತದೆ. ಸಭೆಯಲ್ಲಿಯ ಐಕ್ಯತೆ ದೇವರ ಪ್ರೀತಿಯ ವೈವಿಧ್ಯಮಯ ಪ್ರಭಾವಕ್ಕೆ ಎಡೆ ಮಾಡಿಕೊಡುತ್ತದೆ. ಇಂಥ ಸಾಕ್ಷಿಯಾಗಿಯೇ ಸಬೆ ಇರಬೇಕೆಂದು ಸ್ಥಾಪಿತಗೊಂಡಿದೆ, ಅದರಲ್ಲೂ ವಿಷೇಶವಾಗಿ ಜಗಳ, ಕದನ, ವಿಭಜನೆ ಮತ್ತು ಯುದ್ಧದ ಸಮಯಗಳಲ್ಲಿ.

**ಎಫೆಸ 4:4–6 ಓದಿರಿ. ಈ ಮೂರು ವಾಕ್ಯಗಳಲ್ಲಿ ಕಂಡು ಬರುವ ಒಂದು ನಿಶ್ಚಿತ ಅಂಶ ಯಾವುದು**?

––––––––––––––––––––––––––––––––––––––––––––––

––––––––––––––––––––––––––––––––––––––––––––––

––––––––––––––––––––––––––––––––––––––––––––––

ಈ ಅಧ್ಯಾಯದ ಮೊದಲ ವಾಕ್ಯಗಳಲ್ಲಿ ಪೌಲನು ಸಭೆಯ ಐಕ್ಯತೆಯಲ್ಲಿ ತಾನು ದೀರ್ಘವಾಗಿ ಆಸಕ್ತನಾಗಿರುವುದನ್ನು ವ್ಯಕ್ತ ಪಡಿಸುತ್ತಾನೆ. ಐಕ್ಯತೆಯ ಪ್ರಬೋಧನೆಯೊಂದಿಗೆ ಆತನು ಪ್ರಾರಂಭಿಸುತ್ತಾನೆ(ಎಫೆಸ 4:1–) ಮತ್ತು ವಿಶಾಸಿಗಳನ್ನು ಒಗ್ಗೂಡಿಸುವ ಏಳು ಅಂಶಗಳ ಯಾದಿ ಮಾಡಿದ್ದಾನೆ(ಎಫೆಸ 4:4–6) ಐಕ್ಯತೆಗಾಗಿ ಶ್ರಮಿಸುತ್ತಾರೆ, ಅದನ್ನು ಉಳಿಸಿಕೊಳ್ಳುಲು ಪ್ರಯತ್ನಿಸುತ್ತಾರೆ (ಎಫೆಸ 4:1–3) ಮತ್ತು ಮುಂದೆ ಸಾಧಿಸಬೇಕಾದ. ಅದಕ್ಕಾಗಿ ದುಡಿಯುವುದು (ಎಫೆಸ 4:13) ಪ್ರಸ್ತಾಪವಿದೆ.

“ಅಪೋಸ್ತಲನಾದ ಪೌಲನು ತನ್ನ ಸಹೋದರ ಸಹೋದರಿಯರನ್ನು ತಾನು ತಿಳಿಸಿದ ಸತ್ಯದ ಬಲದಿಂದ ನಡೆಯುವಂತೆ ಪ್ರಬೋದಿಸಿದ್ದಾನೆ. ವಿನಯ ಸಾತ್ವಿಕತ್ವಗಳಿಂದಲೂ, ಪ್ರೀತಿ ಸಾದನೆಗಳಿಂದಲೂ, ಅವರು ಕ್ರಿಸ್ತನಲ್ಲಿಯ ರಕ್ಷಣಾ ಆನಂದವನ್ನು ಪ್ರತಿಬಿಂಬಿಸುತ್ತ ಆತನ ಸದ್ಗುಣಗಳ ಸಾಕ್ಷಿಯೂ ಮತ್ತು ಮಾದ–ರಿಯೂ ಆಗಿರಬೇಕು. ಇಲ್ಲಿರುವದು ಒಂದೇ ದೇಹ, ಒಬ್ಬನೇ ಆತ್ಮನು, ಒಬ್ಬನೇ ಪ್ರಭು, ಒಂದೇ ವಿಶ್ವಾಸ. ಕ್ರಿಸ್ತನೆಂಬ ಒಂದು ದೇಹದ ಸದಸ್ಯರಾಗಿ ವಿಶ್ವಾಸಿಗಳು ಒಬ್ಬ ಆತ್ಮನಿಂದ ಒಂದೇ ನಿರೀಕ್ಷೆಗೆ ನಡೆಸಲ್ಪಡಬೇಕು. ಸಭೆಯಲ್ಲಾಗುವ ಬದುಕುಗಳು ಜಗತ್ತಿನೆದುರು ಕ್ರಿಸ್ತನಿಗೆ ಹಾಗೂ ಆತನ ಧರ್ಮಕ್ಕೆ ಕಳಂಕ, ಅಗೌರವ ತರುತ್ತವೆ; ಮತ್ತು ಸಭೆಯ ವಿರೋಧಿಗಳಿಗೆ ಅವರ ನಿಲುವುಗಳನ್ನು ಸಮರ್ಥಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತೇವೆ. ಪೌಲನ ಈ ಉಪದೇಶ ಅಂದಿನ ಸಭೆಗಾಗಿ ಮಾತ್ರ

ಬರೆಯಲ್ಪಡಲಿಲ್ಲ ಅದು ಇಂದಿನ ಸಭೆಗೂ ಬಹಳ ಅನ್ವಯವಾಗುತ್ತದೆ; ಇದು ದೇವರ ಉದ್ದೇಶ. ಸಮಾಧಾನದ ಬಂಧನದಡಿಯಲ್ಲಿ ಐಕ್ಯತೆಯನ್ನು ಕಾಪಾಡಿಕೊಳ್ಳಲು ನಾವೇನು ಮಾಡುತ್ತಿದ್ದೇವೆ?" ಎಲ್ಲೆನ್ ಜಿ ವೈಟ್, ಟೆಸ್ಟಿಮೋನೀಸ್ ಫಾರ್ ದಿ ಚರ್ಚ, ವೊಲ 5, ಪು. 239.

**"ನೀವು ಕರೆಯಲ್ಪಟ್ಟ ಕರೆಯುವಿಕೆಗೆ ಯೋಗ್ಯರಾಗಿ" ನಡೆಯುವುದನ್ನು ಖಚಿತ ಪಡಿಸುವುದಕ್ಕಾಗಿ ಯಾವ ನಿರ್ಧಾರವನ್ನು ಈಗ ನೀವು ಮಾಡುತ್ತಿರಿ?**

**ಬುಧವಾರ** **ಅಕ್ಟೋಬರ್** 24

**ಸಭೆಯ ಮುಕಂಡರು ಮತ್ತು ಐಕ್ಯತೆ**

"ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ" ಎಫೆಸ 4:7. ರಕ್ಷಣೆಯು ಸ್ವೀಕರಿಸುವ ಪ್ರತಿಯೊಬ್ಬರಿಗೂ ಒಂದು ಕೊಡುಗೆಯಾದರೂ, ಕೆಲವರಿಗೆ ದೈವಿಕ ವರಗಳು ವಿಶೇಷ ಕಾರ್ಯಕ್ಕಾಗಿ ಕೊಡಲ್ಪಡುತ್ತವೆ.

ಎಫೆಸದವರಿಗೆ 4:11 ಓದಿರಿ. ದೇವರು ಯಾವ ನಾಯಕತ್ವ ಕೊಡುಗೆಗಳನ್ನು ಸಭೆಗೆ ಕೊಡುತ್ತಾನೆ?

____________________________________________

____________________________________________

____________________________________________

ಎಫೆಸದವರಿಗೆ 4:12ರಲ್ಲಿ ಹೇಳಿರುವಂತೆ, ನಾಯಕತ್ವದ ವಿಶೇಷ ವರಗಳನ್ನು(ಕೊಡುಗೆಗಳನ್ನು)

____________________________________________

____________________________________________

____________________________________________

ದೇವರು ಸಭೆಗೆ ಕೊಟ್ಟಿದ್ದಾನೆ, ಅದರ ಉದ್ದೇಶವೇನು? ಈ ವರಗಳು ಒಂದೊಂದಕ್ಕೆ ಸಂಬಂಧಿಸಿವೆ?

ಒಂದರ್ಥದಲ್ಲಿ ಎಲ್ಲಾ ಕ್ರೈಸ್ತರು ದೇವರ ಮತ್ತು ಸುವಾರ್ತೆಯ ಸೇವಕರೇ, ಮತ್ತಾಯ 28:19,20ರಲ್ಲಿ ಕ್ರಿಸ್ತನ ಎಲ್ಲ ಕ್ರೈಸ್ತರಿಗೂ ಈ ಸೇವಾ ಆಜ್ಞೆಯನ್ನು ಕೊಟ್ಟಿದ್ದಾನೆ,

ಎಲ್ಲರೂ ಹೋಗಿ ಜಗತ್ತಿನ ಕುಲ ಪ್ರಜೆಗಳನ್ನು, ಶಿಷ್ಯರನ್ನಾಗಿ ಮಾಡುತ್ತ ದೀಕ್ಷಸ್ನಾನ ಮಾಡಿಸಿ ವಾಕ್ಯಗಳನ್ನು ಕಲಿಸಿರಿ, ಎಂದು. ಈ ಸೇವಾ ಕೆಲಸವನ್ನು ಆಯ್ದು ಕೆಲವ–ರಿಗೆ, ಬೋಧಕರು, ಸುವಾರ್ತಿಕರಿಗೆ ಮಾತ್ರ ದೇವರು ಕೊಡಲಿಲ್ಲ ಬದಲಾಗಿ ಕ್ರಿಸ್ತನ ಹೆಸರಿನಲ್ಲಿರುವ ಎಲ್ಲರಿಗೂ ಕೊಟ್ಟಿರುವನು. ಈ ಕೆಲಸ ನನ್ನದಲ್ಲ ಎಂದು ಹೇಳಿ ಯಾರೂ ತಪ್ಪಿಸಿಕೊಳ್ಳಲಾಗುವದಿಲ್ಲ. ಇದನ್ನು ಬಿಟ್ಟು ಬೇರೆ ಕೆಲಸ ನಾನು ಮಾಡುತ್ತೇನೆ ಎಂದು ಯಾವ ಸಭಾನಾಯಕನೂ ಹೇಳಲಾಗುವುದು. ನಾಯಕರಿಗೆ ಆತ್ಮಿಕವರಗಳು ಕೊಡಲ್ಪಟ್ಟಿರುವುದು, ನಿರ್ಧಿಷ್ಟ ಸಭೆಯ ಭಕ್ತಿವೃದ್ಧಿಗಾಗಿ. ಸಭಾನಾಯಕರು, ಸಭೆಯ ಐಕ್ಯತೆಗಾಗಿಯೇ ಶ್ರಮಿಸಬೇಕು ಅದನ್ನು ಪೋಷಿಸಬೇಕು ಮತ್ತು ಉತ್ತೇಜಿಸಬೇಕು.

ಪೌಲನು ಮಾಡಿರುವ ನಾಯಕತ್ವದ ಕೊಡುಗೆಗಳ ಪಟ್ಟಿಗಳ ಪ್ರಕಾರ ಆ ಪಾತ್ರಗಳು ದೇವಜನರು ನಾಶನದಲ್ಲಿರುವವರ ಸೇವೆ ಮಾಡುವಂತಾಗಲು ಸಶಸ್ತ್ರಿಗಳನ್ನಾಗಿ ಮಾಡುವವು. ಸಭೆಯಲಿಂದಲೇ ಕರೆಯಲ್ಪಟ್ಟ ಕೆಲವು ವಿಶೇಷ ವ್ಯಕ್ತಿಗಳು ಜವಬ್ಧಾರಿಯತರಾಗಿ ಇತರರು ತಮ್ಮ ಕೆಲಸದ ಮೂಲಕ ಕ್ರಿಸ್ತನ ಸೇವೆ ಮಾಡಿ, "ಕ್ರಿಸ್ತನ ಪರಿಪೂರ್ಣತೆಯಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು (ಎಫೆಸ 4:13). ಯೇಸುವಿನ ನಾಯಕತ್ವದ ಮಾದರಿಯೇ ನಮ್ಮ ಸೇವೆಗೆ ಮಾರ್ಗದರ್ಶಿಯಾಗಬೇಕು. ಯೇಸು ಸೇವೆ ಮಾಡಿಸಿಕೊಳ್ಳುವುದಕ್ಕಲ್ಲ(ಮತ್ತಾಂಯ 20:25–28); ನಾವು ಹೋಗಿ ಹಾಗೆಯೇ ಮಾಡಬೇಕು.

ಮಾನವರಲ್ಲಿಯ ಒಂದು ಬಲವಾದ ಸ್ವಭಾವ ಸ್ವತಂತ್ರವಾಗಿರುವದು ಮತ್ತು ಯಾರ ಹಂಗೂ ಇಲ್ಲದಿರುವುದು. ಪಾಶ್ಚಾತ್ಯ ಸಮಾಜ ಈ ಪಿಡಿಗಿನಿಂದ ಭಾದಿಸಲ್ಪಟ್ಟಿದೆ. ಪೌಲನು ನಮ್ಮನ್ನು ಎಚ್ಚರಿಸಿದ್ದಾನೆ, ಈ ಜಗತ್ತಿನಲ್ಲಿ ಯಾವ ಕ್ರೈಸ್ತನು ಒಬ್ಬಂಟಿಗನಲ್ಲ ನಾವೆಲ್ಲರೂ ಒಂದೇ ನಂಬಿಕೆಯೂ ಸಮಾಜದವರು, ನಮಗೆ ಧಾರ್ಮಿಕ ಮುಖಂಡ–ರಿದ್ದಾರೆ ಅವರು ಎಲ್ಲರ ಸಾಮಾನ್ಯ ಪಯಣದಲ್ಲಿ ಒಬ್ಬರೊಬ್ಬರಿಗೆ ಉತ್ತೇಜನ ಆದರಣೇ ನೀಡುತ್ತಾರೆ. ನಾವೆಲ್ಲರೂ ಒಂದೇ ಸಮೂಹವಾಗಿ ಕ್ರಿಸ್ತನ ದೇಹದ ಅಂಗಗಳು.

**ನಿಮಗೆ ಯಾವ ದೈವಿಕ ವರಗಳು ಕೊಡಲ್ಪಟ್ಟಿವೆ. ಅವುಗಳನ್ನು ನಿಮ್ಮ ಸ್ಥಳಿಯ ಸಭೆಯು ಒಗ್ಗಟ್ಟಾಗಿ ಹೇಗೆ ಉಪಯೋಗಿಸುತ್ತಿರುವಿರಿ?**

**ಕ್ರಿಸ್ತನಲ್ಲಿ ಮಾನವ ಸಂಬಂಧಗಳು**

ಕ್ರೈಸ್ತ ಧರ್ಮವು ಸಂಬಂಧಗಳ ಧರ್ಮವು: ದೇವರೊಡನೆಯ ಸಂಬಂಧ ಮತ್ತು ಒಬ್ಬರೊಬ್ಬರೊಡನೆಯ ಸಂಬಂಧ. ದೇವರೊಡನೆ ನಾನು ಆಳವಾದ ಸಂಬಂಧ ಇಟ್ಟುಕೊಂಡಿದ್ದೇನೆ ಎಂದು ಹೇಳಿಕೊಂಡು ಆ ಸಂಬಂಧ ಇತರರೊಡನೆ ಉತ್ತಮ ಸಂಬಂಧದಲ್ಲಿರುವ ಹಾಗೆ ಪ್ರಭಾವ ಬೀರದೆ ಹೋದರೆ ಆ ಹೇಳಿಕೆಗೆ ಯಾವ ಬೆಲೆಯಿರುವುದಿಲ್ಲ. ಕ್ರೈಸ್ತತ್ವವು ನಿರ್ವಾತ ಪ್ರದೇಶದಲ್ಲಿರುವುದಿಲ್ಲ ಚರ್ಚಿಸಿದ ಐಕ್ಯತೆಯ ತತ್ವಗಳು ನಾವು ಒಬ್ಬರೊಡನೊಬ್ಬರು ಅನ್ಯೋನ್ಯತೆವಾಗಿ ಜೀವಿಸುವುದಕ್ಕೆ ಸಂಬಂಧಿಸಿವೆ.

**ಎಫೆಸದವರಿಗೆ 5:15–21 ಓದಿರಿ: 21ನೇ ವಚನದಲ್ಲಿ ಪೌಲನು ನಮಗೆ ಹೇಳುತಿ ್ತರುವುದೇನು?ವಿನಯತೆಗೂ ಮತ್ತು ಐಕ್ಯತೆಗೂ ಇರುವ ಸಂಬಂಧ ಯಾವುದು?**

____________________________________________

____________________________________________

____________________________________________

ಪೌಲನು ಪ್ರಬೋಧನೆ, ಒಬ್ಬರಿಗೊಬ್ಬರು ವಿನಯದಿಂದಿರುವುದಕ್ಕೆ ಒಪ್ಪಿಸಿಕೊಡಿರಿ ಎಂಬುದು, ಎಫೆಸ 5:18ರಲ್ಲಿರುವ "ಪವಿತ್ರಾತ್ಮಭರಿತರಾಗಿದ್ದು" ಎಂಬ ಪದಕ್ಕೆ ಜೋಡಿಸಲ್ಪಟ್ಟಿದೆ. ಪವಿತ್ರಾತ್ಮನಿಂದ ತುಂಬಿದವರಾಗಿರಬೇಕು ಎನ್ನುವುದನ್ನು ಇನ್ನೊಂದು ವಾಕ್ಯದಲ್ಲಿ ಹೇಳುವದಾದರೆ ಒಬ್ಬರಿಗೊಬ್ಬರು ವಿನಯದಿಂದಿರಿ. ಇದು ನಾವು ಇತರ ಜನರೊಂದಿಗೆ ದೀನತೆಯ ಮತ್ತು ಕಾಳಜಿಯ ಸರಿಯಾದ ಮನೋಭಾವ ಹೊಂದಿರಬೇಕೆಂದು ತಿಳಿಸುತ್ತದೆ. ಹೌದು ಇದು ಸಹಜವಾಗಿ ಅನೇಕರಲ್ಲಿ ತೋರಿಬರುವ ಗುಣವಲ್ಲ,ಯಾರಲ್ಲಿ ಪವಿತ್ರಾತ್ಮ ನೆಲೆಸುತ್ತಾನೋ ಅವರಲ್ಲಿ ಮಾತ್ರ ಈ ಗುಣಗಳು ತೋರಿಬರಲು ಸಾದ್ಯ. ಅದು ಆತ್ಮನ ಕೊಡುಗೆ, ಆತ್ಮನು ಕ್ರಿಸ್ತನಲ್ಲಿ ನಮ್ಮನ್ನು ಅನ್ಯೋನ್ಯವಾಗಿ ಬಂಧಿಸುವವನು ಈ ದೃಷ್ಟಿಯಿಂದ ಇದನ್ನು ನೋಡಿದರೆ, ವಿನಯದಿಂದಿರುವುದು ಒಬ್ಬ ವ್ಯಕ್ತಿಯ ಅಂತರ್ಯಗುಣ, ಅದು ನಮಗಾಗಿ ತ್ಯಾಗದಿಂದ ಮಡಿದ ಕ್ರಿಸ್ತನಿಗೆ ತೋರುವ ಗೌರವ.

**ಎಫೆಸದವರಿಗೆ 5:22–6:9 ಓದಿರಿ. ಒಬ್ಬರಿಗೊಬ್ಬರು ವಿನಯದಿಂದಿರುವದು ಎಂಬ**

**ಗುಣ ಮನೆ ಮತ್ತು ಕೆಲಸದ ಸ್ಥಳಗಳಲ್ಲಿ ಕ್ರೈಸ್ತ ವಿಶ್ವಾಸಿಗಳಿಗೆ ಅವರ ಮಾನವ ಸಂಬಂಧಗಳ ಮೇಲೆ ಯಾವ ಪರಿಣಾಮ ಬೀರುತ್ತದೆ?**

______________________________________________

______________________________________________

______________________________________________

ಹೆಚ್ಚಿನ ಮಟ್ಟಿಗೆ, ಸಭೆಯಲ್ಲಿಯ ಐಕ್ಯತೆ ಮನೆಯಲ್ಲಿಯ ಐಕ್ಯತೆಯ ಮೇಲೆ ಅವಲಂಬಿಸಿರುತ್ತದೆ. ಕ್ರಿಸ್ತನು ಸಭೆಗೆ ಯಾವ ಸ್ವತ್ಯಾಗ ಪ್ರೀತಿ ತೋರಿಸಿರುವನೋ ಅದನ್ನೇ ಮಾದರಿಯಾಗಿಟ್ಟುಕೊಂಡು ಪತಿ–ಪತ್ನಿಯರು ಐಕ್ಯತೆ, ಪ್ರೀತಿ ಗೌರವಗಳನ್ನು ರೂಢಿ ಮಾಡುತ್ತಿರಬೇಕೆಂದು ಪೌಲನು ಒತ್ತಿ ಹೇಳಿದ್ದಾನೆ. ಹೀಗೆ ಕ್ರಿಸ್ತನಂಥ ಗೌರವವನ್ನು ಮನೆಯಲ್ಲಿಯೂ, ಸಭೆಯಲ್ಲಿಯೂ ಎಲ್ಲ ಗಂಡಂದಿರು, ಸತಿಯರೂ ಮತ್ತು ಸದಸ್ಯರೂ ಸದಾ ರೂಡಿಮಾಡಬೇಕು. ಕ್ರಿಸ್ತನಂಥಗುಣ ಪೋಷಕ ಮತ್ತು ಮಕ್ಕಳ ಹಾಗೂ ಕೆಲಸಗಾರರ ಕೆಲಸೊದಗಿಸುವವರ(ದಾಸತ್ವದಲ್ಲಿರುವವರ ಮತ್ತು ಯಜಮಾನರ) ನಡುವೆಯ ಸಂಬಂಧಗಳಲ್ಲಿ ಮಾದರಿಯಾಗಿ ರೂಡಿಯಲ್ಲಿರಬೇಕು. ನಮ್ಮ ಮನೆಗಳಲ್ಲಿ ಯಾವ ಹೊಂದಾಣಿಕೆಯ, ಶಾಂತಿ ಸಮಾಧಾನ ವಾತಾವರಣ ನೆಲೆಯಾಗಿರಬೇಕೆಂದು ಹಾರೈಸುತ್ತೇವೋ ಅದೇ ವಾತಾವರಣ ಸಭೆಯಲ್ಲಿಯೂ ನೆಲೆಯಾಗಿರಬೇಕು.

**ಈ ದಿನದ ವಾಕ್ಯಗಳಲ್ಲಿರುವ ಯಾವ ಜೀವನ ತತ್ವಗಳು ನೀವು ನಿಮ್ಮ ಕುಟುಂಬದ ಸದಸ್ಯರೊಡನೆ ಅಥವಾ ಸಹ್ಯೂದ್ಯೋಗಿಗಳೊಡನೆ ಉತ್ತಮವಾಗಿ (ಪರಿಸ್ಥಿತಿಗಣುಗುಣವಾಗಿ)ವರ್ತಿಸಲು ಸಹಾಯವಾಗುವವು?**

**ಶುಕ್ರವಾರ** **ಅಕ್ಟೋಬರ್ 26**

**ಹೆಚ್ಚಿನ ಅಭ್ಯಾಸಕ್ಕಾಗಿ: ಎಲ್ಲೆನ್ ಜಿ ವೈಟ್, "ದಿ ಸ್ಪಿರಿಟ್ ಆಫ್ ಯುನಿಟಿ", ಪು. 179–188, ಟೆಸ್ಟಿಮೋನೀಸ್ ಫರ್ ದಿ ಚರ್ಚ, ವೊಲ್ 9**

"ಕ್ರಿಸ್ತನು ಯಾವ ರಾಷ್ಟ್ರಕತೆ ಅಥವಾ ಅಂತಸ್ತು(ಸ್ಥಾನ) ಅಥವಾ ಜಾತಿ ಮಾನ್ಯತೆ ಮಾಡಿಲಿಲ್ಲ ಶಾಸ್ತ್ರಿಗಳು ಮತ್ತು ಫರಿಸಾಯರು ಪರಲೋಕದ ಎಲ್ಲಾ ವರಗಳು ತಮಗೂ ಮತ್ತು ತಮ್ಮ ರಾಷ್ಟ್ರದ ಹಿತಕ್ಕಾಗಿ ಎಂದು ಬಯಸಿ ಭೂಮಿಯ ಮೇಲಿನ ಉಳಿದವರು ಅವುಗಳಿಗೆ ಅರ್ಹರಲ್ಲವೆಂದರು. ಆದರೆ ಕ್ರಿಸ್ತನು ಇಂಥ ಇಬ್ಭಾಗಿಸುವ ಗೋಡೆಯನ್ನು ಒಡೆದು ಹಾಕಲು ಬಂದನು. ಹೇಗೆ ಗಾಳಿ, ಬೆಳಕು ಅಥವಾ ಮಳೆ ಭೂಮಿಯನ್ನು ತಣಿಸಿ ಉಜ್ಜೀವಿಸುತ್ತದೆಯೋ ಹಾಗೆಯೇ ಕ್ರಿಸ್ತನ ಕೃಪೆ ಮತ್ತಿ ಪ್ರೀತಿಯ

ಕೊಡುಗೆ ಭೂಮಿಯನ್ನು ತನಿಸುವದಕ್ಕಾಗಿ ಎಂದು ತೋರಿಸಲು ಆತನು ಬಂದನು".

"ಕ್ರಿಸ್ತನು ಬದುಕು ಸ್ಥಾಪಿಸಿದ ಧರ್ಮ ಜಾತಿರಹಿತ, ಆ ಧರ್ಮದ ಮೂಲಕ ಯೆಹೂದಿ ಮತ್ತು ಅನ್ಯ, ಸ್ವತಂತ್ರ ಮತ್ತು ದಾಸ ಎಲ್ಲರೂ ಒಂದೇ ಸಹೋದರ ಬಾಂಧವ್ಯದಲ್ಲಿ ಪೋಣಿಸಲ್ಪಟ್ಟವರೇ, ದೇವರ ಮುಂದೆ ಎಲ್ಲರೂ ಸರಿ ಸಮಾನರು. ಆತನ ಬೋಧನೆಗಳ ಅನುಸರಣೆಯನ್ನು ಬೇರಾವ ಅಡತಡೆಗಳು ನಿಲ್ಲಿಸಲಾಗಿಲಿಲ್ಲ. ಆತನು ಪರಿಚಯದವರು ಮತು ಅನ್ಯರು ಸ್ನೇಹಿತರು ಮತ್ತು ವೈರಿಗಳು ಎಂಬ ಯಾವ ಭೇದವನ್ನು ಮಾಡಲಿಲ್ಲ. ಆತನ ಹೃದಯದಿಂದ ಬಂದದ್ದೆಲ್ಲಾ ಬೆಂದ ಜೀವಿಗಳಿಗೆ ಜೀವ ತುಂಬುವ ಜೀವಜಲವಾಗಿತ್ತು".–ಎಲೆನ್ ಜಿ ವೈಟ್, ಟೆಸ್ಟಿಮೋನೀಸ್ ಫಾರ್ ದಿ ಚರ್ಚ, ವೊಲ್ 9, ಪು. 190,191.

**ಚರ್ಚಿಸಲು ಪ್ರಶ್ನೆಗಳು:**

1. ಈ ವಾಕ್ಯದ ಮೇಲೆ ಚಿಂತನ ಮಾಡಿರಿ: "ಎಫೆಸದವರಿಗೆ ಪತ್ರಿಕೆಯ ನಾಲ್ಕನೆಯ ಅಧ್ಯಾಯದಲ್ಲಿ ದೇವರು ಬಹಳ ಸ್ಪಷ್ಟವಾಗಿಯೂ ಸರಳವಾಗಿಯೂ ತಿಳಿಸಿರುವದೇನೆಂದರೆ, ಆತನ ಎಲ್ಲ ಮಕ್ಕಳು ತಿಳಿಸಲ್ಪಟ್ಟಿರುವ ಸತ್ಯದಲ್ಲಿ ನೆಲೆಗೊಂಡಿರಬೇಕು. ಆತನ ಸಭೆಯಲ್ಲಿಯ ಐಕ್ಯತೆಯನ್ನು ಕಾಪಾಡುವ ಎತ್ತಿ ಹಿಡಿಯುವ ಸಾಧನವೇ ಅದು, ಹೀಗಾದರೆ ಅದರ ಸದಸ್ಯರು ತಮ್ಮಲ್ಲಿಯ ಆರೋಗ್ಯಕರ ಅಧ್ಯಾತ್ಮಿಕ ಅನುಭವವನ್ನು ಜಗತ್ತಿಗೆ ಪ್ರದರ್ಶಿಸಲು ಸಾಧ್ಯವಾಗುತ್ತದೆ".– ಎಲೆನ್ ಜಿ ವೈಟ್ ಕಾಮೆಂಟ್ಸ್, ದಿ ಎಸ್ ಡಿ ಎ ಬೈಬಲ್ ಕಾಮೆಂಟರಿ ವೊಲ್ 6, ಪು 1117. ಸಭೆಯ ಐಕ್ಯತೆಯನ್ನು ಎಫೆಸದವರಿಗೆ 4ರಲ್ಲಿ ಯಾವುದು ಸೂಚಿಸುತ್ತದೆ? ಆ ಐಕ್ಯತೆಯನ್ನು ಕಾಪಾಡಿಕೊಳ್ಳಲು ನಾವೇನು ಮಾಡಬೇಕು?

2. ಐಕ್ಯತೆಗೆ ಅತ್ಯವಶ್ಯವಾದದ್ದು ದೀನತೆ ಮತ್ತು ವಿನಯತೆ. ಇವುಗಳಿಲ್ಲದೆ ಸಭೆಯಲ್ಲಿ ಹೇಗೆ ಐಕ್ಯತೆ ಉಳಿಯಬಹುದು? ನಾವು ಗರ್ವದಿಂದಿದ್ದು, ನಮ್ಮ ದೃಷ್ಟಿಕೋನಗಳು ಮತ್ತು ನಿಲುವು ಸರಿಯೆಂದು ತೋಚಿ, ಇತರರ ಅಭಿಪ್ರಾಯಗಳೀಗೆ ಓಗೂಡದಿದ್ದರೆ, ನಮ್ಮಲ್ಲಿ ಐಕ್ಯತೆ ಉಂಟಾಗಲು ಸಾದ್ಯವೇ ಇಲ್ಲ. ನಾವು ಹೇಗೆ ದೀನರಾಗಿಯು ಮತ್ತು ವಿನಯದಿಂದಲೂ ಇರುವುದನ್ನು ಕಲಿಯಬಹುದು?

3. ನಾವು ಎಲ್ಲ ವಿಷಯಗಳಿಗೆ ಒಪ್ಪಿಕೊಳ್ಳದಿದ್ದರೂ ಐಕ್ಯತೆಯಿಂದಿರಬಹುದು ಹೇಗೆ?

**ಸಾರಾಂಶ**: ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನು ಅನೇಕ ಬುದ್ಧಿ ಬೋಧನೆಗಳನ್ನು ಬರೆದು, ಕ್ರೈಸ್ತರು "ಕ್ರಿಸ್ತನಲ್ಲಿರುವದು" ಎಂದರೇನು ಎಂಬುದನ್ನು ತಿಳಿಸಿದ್ದಾನೆ. ಕ್ರಿಸ್ತನಲ್ಲಿಯ ರಕ್ಷಣೆ ನಮ್ಮನ್ನು ನಮ್ಮ ಬದುಕಿನ ಕೃತಿಗಳಲ್ಲಿ ಮಾರ್ಪಡಿಸುತ್ತದೆ. ನಮ್ಮ ಎಲ್ಲ ಮಾನವ ಸಂಬಂಧಗಳು, ಕ್ರಿಸ್ತನ ಶಕ್ತಿಯಿಂದ ಮಾರ್ಪಡುತ್ತವೆ. ಐಕ್ಯತೆ ಉಂಟಾಗ ಬೇಕೆಂದರೆ ಈ ಬದುಕಿನ ಬದಲಾವಣೆ, ಅಥವಾ ಪರಿವರ್ತನೆ ಬಹಳ ಅವಶ್ಯವಾಗಿದೆ.